

# ಕಾಜಲ್‌ನಲ್ಲಿ ಕಂಡ ಕಾನ್ಫಿಡೆನ್ಸ್!

■ ಗೌರಿ

**ಮನೆ–ಕಚೇರಿ ಎರಡೂ ಕಡೆ ಶೋಷಣೆಗೊಳಗಾಗುವ ಹೆಣ್ಣು ಒಮ್ಮೆಗೇ ಆತ್ಮವಿಶ್ವಾಸದಿಂದ ಜೀವನವನ್ನು ಎದುರಿಸುವ ಕಥನದ ‘ಕಾಜಲ್’ ಕಿರುಚಿತ್ರ, ಸ್ತ್ರೀಯರನ್ನು ಸುತ್ತುವರೆದಿರುವ ಬೇಲಿಯನ್ನು ಕಿತ್ತೊಗೆಯುವ ಹಂಬಲ ಹೊಂದಿದೆ.**

ಪಳಗಿದ ಆನೆಯನ್ನು ಪೂರ್ತಿ ನಿಯಂತ್ರಿಸುವುದು ಒಂದು ಸಣ್ಣ ಅಂಕುಶ. ಆ ಅಂಕುಶವೂ, ಅಂಕುಶವನ್ನು ಹಿಡಿದ ಮಾವುತನೂ ಆನೆಯ ಶಕ್ತಿಯ ಮುಂದೆ ಹುಲ್ಲುಕಡ್ಡಿಗೆ ಸಮ. ಆದರೆ ತನ್ನ ಸಾಮರ್ಥ್ಯದ ಬಗ್ಗೆ ತನಗೇ ಅರಿವಿಲ್ಲದಿರುವಾಗ ಆ ಅಂಕುಶವೂ, ಅದನ್ನು ಹಿಡಿದ ಮಾವುತನೂ ಅದಕ್ಕೆ ಭಯ ಹುಟ್ಟಿಸುತ್ತಾರೆ.

ಇದು ಬರೀ ಆನೆಯ ಕಥೆಯಲ್ಲ. ನಾಗರಿಕ ಸಮಾಜದ ರಚನೆಯನ್ನು ಸಾವಿರಾರು ವರ್ಷಗಳಿಂದ ರೂಪಿಸುತ್ತಿರುವುದು ಮತ್ತು ನಿಯಂತ್ರಿಸುತ್ತಿರುವುದೂ ‘ಪಳಗಿಸಿ ಅಂಕುಶದ ಸನ್ನೆಗೆ ಒಗ್ಗಿಸುವ’ ತಂತ್ರವೇ. ಹಾಗಾಗಿಯೇ ಇನ್ನೂ ನಮ್ಮ ಸಮಾಜದಲ್ಲಿ ಜಾತಿ, ಧರ್ಮ, ಲಿಂಗ, ಹಣ ಎಲ್ಲದರ ಹೆಸರಿನಲ್ಲಿಯೂ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನ ಮೇಲೆ ಶೋಷಣೆ ನಡೆಸುತ್ತಿದ್ದಾನೆ.

ಪಳಗಿಸಿದ ಆನೆಯೂ ಮದ ಬಂದಾಗ ಮಾವುತನನ್ನು ಕೆಡವಿ ತುಳಿಯುವುದುಂಟು. ಮದವೇರಿದ ಆನೆಗೆ ಯಾವ ಅಂಕುಶವೂ ತಾಕುವುದಿಲ್ಲ. ಹಾಗೆಯೇ ಸಮಾಜದಲ್ಲಿ ಶೋಷಣೆಗೊಳಗಾಗುತ್ತಿರುವ ಸಮುದಾಯ, ಸ್ತ್ರೀಯರು ಎಲ್ಲರ ಆಂತರ್ಯವೂ ತನ್ನ ಸಾಮರ್ಥ್ಯವನ್ನು ತಾನೇ ಅರಿಯುವ ಗಳಿಗೆಗಾಗಿ, ಅದನ್ನು ದೊರಕಿಸಿಕೊಡುವ ‘ಟ್ರಿಗರ್’ಗಾಗಿ ಕಾಯುತ್ತಿರುತ್ತವೆ. ಅದು ದೊರಕಿದ್ದೇ ಅವರನ್ನು ಸುತ್ತುವರಿದಿರುವ ಬೇಲಿಗಳು, ನಿಯಂತ್ರಿಸುತ್ತಿರುವ ಮಾವುತರೆಲ್ಲ ತಂತಾನೆಯೇ ನೆಲಕ್ಕುರುಳುತ್ತಾರೆ.

ಇಂಥ ಒಂದು ‘ಟ್ರಿಗರ್’ ಅನ್ನು ಕಾಣಿಸುವ ಕಿರುಚಿತ್ರ ‘ಕಾಜಲ್’. ಉದ್ಯೋಗದ ಸ್ಥಳ, ರಸ್ತೆ, ಮನೆ ಎಲ್ಲ ಕಡೆಗಳಲ್ಲಿಯೂ ಪುರುಷನಿಂದ ಬಗೆಬಗೆಯ ಕಿರುಕುಳಕ್ಕೆ ಒಳಗಾಗುತ್ತಿರುವ ಹೆಣ್ಣೊಬ್ಬಳು ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವುದನ್ನು ಈ ಕಿರುಚಿತ್ರ ಸೆರೆಹಿಡಿದಿದೆ. ಕಲಾತ್ಮಕ ದೃಷ್ಟಿಯಿಂದ ತುಸು ಕೃತಕವೆನಿಸಿದರೂ, ಆಶಯ ಮತ್ತು ಉದ್ದೇಶದ ದೃಷ್ಟಿಯಿಂದ ಈ ಕಿರುಚಿತ್ರ ಮುಖ್ಯವಾಗಿದ್ದನ್ನು ಹೇಳುತ್ತಿದೆ.



**ಹೆಸರು:** ಕಾಜಲ್
**ನಿರ್ದೇಶನ:** ಪಾಖಿ ಎ ಟಯರ್‌ವಾಲಾ
**ನಿರ್ಮಾಣ:** ಸೋನಾಲಿ ಜಿ ಶೆಖಾವತ್
**ಛಾಯಾಗ್ರಹಣ:** ವಿವಿಯಾನ್ ಸಿಂಗ್ ಸಾಹಿ
**ಸಂಕಲನ:** ಸರ್ವೇಶ್ ಕುಮಾರ್ ಸಿಂಗ್
**ಸಂಗೀತ:** ದೃಷ್ಟಿ
**ತಾರಾಗಣ:** ಸಲೋನಿ ಲೂಥ್ರಾ, ಸುನೀಲ್ ಪಾಲ್ವಾನ್, ಅನಿಕೇತ್ ಮೋರ್

ಆಫೀಸಿನಿಂದ ಎಲ್ಲರೂ ಹೊರಟರೂ ಈಕೆಗೆ ಬಿಡುಗಡೆಯಿಲ್ಲ. ತಡರಾತ್ರಿ ಆಫೀಸಿಂದ ಹೊರಟವಳಿಗೆ ಬಸ್ ಸ್ಟ್ಯಾಂಡಿನಲ್ಲಿ ಒಂದು ಪುಟ್ಟ ಚೀಲ ಸಿಗುತ್ತದೆ. ಕುತೂಹಲದಿಂದ ಆ ಚೀಲವನ್ನು ಎತ್ತಿಕೊಂಡು ಮನೆಗೆ ಹೋಗುತ್ತಾಳೆ. ಮನೆಗೆ ಹೋದರೆ ಕುಡುಕ, ಕ್ರಿಕೆಟ್ ಬೆಟ್ಟಿಂಗ್ ಆಡುವ ಗಂಡ. ತಡವಾಗಿ ಬಂದ ಹೆಂಡತಿಯನ್ನು ಅವಾಚ್ಯವಾಗಿ ನಿಂದಿಸುವ ಗಂಡಸು. ಅವಳು ಕಾಜಲ್ ಹಾಕಿಕೊಂಡಿದ್ದು ಕಂಡರೂ ಅವನಿಗಾಗದು.

ಅಂದು ರಾತ್ರಿ ಗಂಡ ನಿದ್ರೆ ಹೋದ ಮೇಲೆ ಅವಳು ಆ ಚೀಲವನ್ನು ಎತ್ತಿ ನೋಡುತ್ತಾಳೆ. ಅದರೊಳಗೆ ಮಿರಿಮಿರಿ ಮಿರುಗುವ ಒಂದು ಪಿಸ್ತೂಲ್ ಕಾಣಿಸುತ್ತದೆ. ಆಹಾ, ಅದೆಷ್ಟು ನಯ, ಅದೆಂಥ ಹೊಳಪು. ತನ್ನ ಬದುಕಿನಲ್ಲಿ ಎಂದೋ ಕಳೆದುಹೋಗಿದ್ದ ಯಾವುದೋ ಒಂದು ಭಾಗವೇ ಪಿಸ್ತೂಲಿನ ರೂಪದಲ್ಲಿ ಸಿಕ್ಕಂತೆ ಅವಳ ಮುಖದಲ್ಲಿ ಸಂಭ್ರಮವುಕ್ಕುತ್ತದೆ. ಆ ಪಿಸ್ತೂಲು ಅವಳಿಗೆ ವಿಚಿತ್ರವಾದ ಆತ್ಮವಿಶ್ವಾಸವನ್ನೂ ಇಡೀ ಜಗತ್ತನ್ನೇ ಎದುರಿಸಿ ನಿಲ್ಲುವ ಸ್ಥೈರ್ಯವನ್ನೂ ಕೊಡುತ್ತದೆ. ಪಿಸ್ತೂಲನ್ನು ಬ್ಯಾಗಿನಲ್ಲಿಟ್ಟುಕೊಂಡೇ ಅದನ್ನು ತೆರೆಯದೆಯೇ ಅವಳು ಆಫೀಸು, ಸೆಕ್ಯೂರಿಟಿ ಎಲ್ಲ ಕಡೆ ತನ್ನ ಮೇಲೆ ಯಾವತ್ತಿಂದ ನಡೆಯುತ್ತಿದ್ದ ದಬ್ಬಾಳಿಕೆಯನ್ನು ಧೈರ್ಯವಾಗಿ ಎದುರಿಸಿ ಬರುತ್ತಾಳೆ.

‘ಕಾಜಲ್’ ಕಿರುಚಿತ್ರದ ಕೊನೆಯೂ ಅಷ್ಟೇ ಧ್ವನಿಪೂರ್ಣವಾಗಿದೆ. ಕಾಡಿಗೆ ಹಚ್ಚಿಕೊಂಡಿದ್ದಾಳೆಂಬ ಕಾರಣಕ್ಕೆ ಹಿಂಸಿಸಲು ಬಂದ ಗಂಡನ ಎದೆಗೆ ಪಿಸ್ತೂಲ್ ಗುರಿಯಿಡುತ್ತಾಳೆ. ಟ್ರಿಗರ್ ಅದುಮುತ್ತಾಳೆ. ಆದರೆ ಅದರಲ್ಲಿ ಬುಲೆಟ್ ಇಲ್ಲ! ಕ್ಲಿಕ್ ಎಂದು ಸದ್ದು ಹೊರಡಿಸಿ ಸುಮ್ಮನಾಗುತ್ತದೆ. ಆದರೆ ಗುಂಡು ಹೊಡೆಯುವ ಪ್ರಮೇಯವೇ ಇಲ್ಲದೆ, ಪಿಸ್ತೂಲು ಹಿಡಿದು ನಿಂತ ಹೆಂಡತಿಯನ್ನು ನೋಡಿ ಗಂಡ ಚಿಕ್ಕ ಮಕ್ಕಳಂತೆ ಬಿಕ್ಕಳಿಸುತ್ತಾ ಕುಸಿಯುತ್ತಾನೆ. ಪುರುಷ ಅಹಂಕಾರ ಮತ್ತು ಸ್ತ್ರೀಯರ ಮೇಲೆ ದಬ್ಬಾಳಿಕೆ ನಡೆಸುವುದನ್ನು ತನ್ನ ಶಕ್ತಿಪ್ರದರ್ಶನದ ಸಂಕೇತ ಎಂದು ನಂಬಿರುವ ಪುರುಷನ ಪೊಳ್ಳುತನವನ್ನು ಈ ದೃಶ್ಯ ತುಂಬ ಸಮರ್ಥವಾಗಿ ಬಿಂಬಿಸುತ್ತದೆ. ಇಡೀ ಚಿತ್ರದಲ್ಲಿ ನಾಯಕಿ ಒಂದೇ ಒಂದು ಮಾತನ್ನೂ ಆಡುವುದಿಲ್ಲ. ಅವಳ ಕಣ್ಣುಗಳೇ ಮಾತಾಡುತ್ತವೆ. ಆ ಮಾತುಗಳು ಸ್ತ್ರೀಯರನ್ನು ಸುತ್ತುವರೆದಿರುವ ಬೇಲಿಯನ್ನು ಕಿತ್ತೊಗೆಯುವ ಶಕ್ತಿಯನ್ನು ಹೊಂದಿವೆ.

ಈ ಕಿರುಚಿತ್ರ ವೀಕ್ಷಣೆಗೆ https://youtu.be/IdOYD6XVFIM ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.